# ಇ.ಡಿ.—ಐ.ಟಿ. ಜುಗಲಬಂದಿ



17

**2019**ರಲ್ಲಿ ರಾಜಕೀಯ ಮೊಗಸಾಲೆಯಲ್ಲಿ ಹೆಚ್ಚು ಕೇಳಿಸಿದ ಪದಗಳು – 'ಇ.ಡಿ.' ಹಾಗೂ 'ಐ.ಟಿ.' ರಾಜಕೀಯ ಎದುರಾಳಿಗಳನ್ನು ಹಣಿಯಲಿಕ್ಕಾಗಿ ಕೇಂದ್ರ ಸರ್ಕಾರ ಈ ಎರಡೂ ಸಂಸ್ಥೆಗಳನ್ನು ಬಳಸಿಕೊಳ್ಳುತ್ತದೆ ಎನ್ನುವ ಆರೋಪ–ಚರ್ಚೆಗಳು ವರ್ಷದುದ್ದಕ್ಕೂ ಚಾಲ್ತಿಯಲ್ಲಿದ್ದವು. 'ಇ.ಡಿ.' – 'ಐ.ಟಿ.' ಹವಾ ಇನ್ನೂ ಚಾಲ್ತಿಯಲ್ಲಿದೆ.

ಜಾರಿ ನಿರ್ದೇಶನಾಲಯವು (ಇ.ಡಿ) ಮಹಾರಾಷ್ಟ್ರ ರಾಜ್ಯ ಸಹಕಾರಿ ಬ್ಯಾಂಕ್ ಪ್ರಕರಣದಲ್ಲಿ ಎನ್‌ಸಿಪಿ ಮುಖಂಡರಾದ ಶರದ್ ಪವಾರ್ ಮತ್ತು ಅಜಿತ್ ಪವಾರ್ ವಿರುದ್ಧ ಸೆಪ್ಟೆಂಬರ್ ತಿಂಗಳಲ್ಲಿ ಪ್ರಕರಣ ದಾಖಲಿಸಿತ್ತು. ಅಕ್ಟೋಬರ್‌ನಲ್ಲಿ ನಡೆದ ಚುನಾವಣೆಯ ನಂತರ ಮಹಾರಾಷ್ಟ್ರದಲ್ಲಿ ಅಜಿತ್ ಪವಾರ್ ಬೆಂಬಲ ಪಡೆದು ದೇವೇಂದ್ರ ಫಡಣವೀಸ್ ಅವರು ಕಿರು ಅವಧಿಯ ಸರ್ಕಾರ ರಚಿಸಿದರು. ಆಗ ಮಿಲೆನಿಯಲ್ ನೆಟ್ಟಿಗರೊಬ್ಬರು 'ಮಹಾರಾಷ್ಟ್ರದಲ್ಲಿ ಇ.ಡಿ.ಯಿಂದ ಸರ್ಕಾರ ರಚನೆ' ಎಂದು ಫೇಸ್‌ಬುಕ್‌ನಲ್ಲಿ ಪೋಸ್ಟ್ ಮಾಡಿದ್ದರು.

ಕೇಂದ್ರೀಯ ತನಿಖಾದಳವು (ಸಿಬಿಐ) 'ಪಂಜರದ ಗಿಣಿ' ಎಂಬ ಕುಖ್ಯಾತಿಯನ್ನು ಯುಪಿಎ ಸರ್ಕಾರದ ಅವಧಿಯಲ್ಲೇ ಪಡೆದಿದೆ. ಸಿಬಿಐ ಎಂಬ ಸಂಸ್ಥೆಯನ್ನು ಎಲ್ಲ ಪಕ್ಷಗಳ ಸರ್ಕಾರಗಳೂ ಅಷ್ಟಿಷ್ಟರಮಟ್ಟಿಗೆ ದುರ್ಬಳಕೆ ಮಾಡಿಕೊಂಡ ಪರಿಣಾಮವಾಗಿ ಈ ಸಂಸ್ಥೆಯ ವಿಶ್ವಾಸಾರ್ಹತೆ ಬಗ್ಗೆ ಹೆಚ್ಚು ಮಾತನಾಡದಿರುವುದೇ ಒಳ್ಳೆಯದು ಎನ್ನುವ ಸ್ಥಿತಿ ಇದೆ. ಸಿಬಿಐ ಸಾಗಿದ ದಿಕ್ಕಿನತ್ತ ಇ.ಡಿ ಹಾಗೂ ಆದಾಯ ತೆರಿಗೆ ಇಲಾಖೆ ಕೂಡ ಹೆಜ್ಜೆ ಇರಿಸಿದ್ದು 2019ರಲ್ಲಿ ಕಂಡುಬಂತು.

ಲೋಕಸಭಾ ಚುನಾವಣೆ ಹೊಸ್ತಿಲಲ್ಲಿ ಇದ್ದಾಗ ರಾಜ್ಯದಲ್ಲಿ ಜೆಡಿಎಸ್ ಮುಖಂಡರ ಜೊತೆ ನಂಟು ಹೊಂದಿದವರ ಮೇಲೆ ಐ.ಟಿ. ಅಧಿಕಾರಿಗಳು ದಾಳಿ ನಡೆಸಿದರು. ಇದನ್ನು ಖಂಡಿಸಿ ಜೆಡಿಎಸ್ ಮುಖಂಡರು, ಅಂದಿನ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ನೇತೃತ್ವದಲ್ಲೇ ಪ್ರತಿಭಟನೆ ನಡೆಸಿದರು. ಈ ಪ್ರತಿಭಟನೆಗೆ ಅಂದು ಸರ್ಕಾರದ ಭಾಗವಾಗಿದ್ದ ಕಾಂಗ್ರೆಸ್ಸಿನ ನಾಯಕರೂ ಕೈಜೋಡಿಸಿದರು. ಸಿಬಿಐ ವಿಶ್ವಾಸಾರ್ಹತೆಗೆ ಧಕ್ಕೆ ಬಂದಿದ್ದರಲ್ಲಿ ಕಾಂಗ್ರೆಸ್ಸಿನ ಪಾಲು ಬಲುದೊಡ್ಡದು. ಹಾಗೆ ಮಾಡಿದ್ದಕ್ಕೆ ಬಿಜೆಪಿಯು ಕಾಂಗ್ರೆಸ್ಸನ್ನು ಕಟುವಾಗಿ ಟೀಕಿಸುತ್ತಿತ್ತು. ಆದರೆ ಈಗ ಬಿಜೆಪಿಯ ಆಡಳಿತಾವಧಿಯಲ್ಲಿ ಇ.ಡಿ ಮತ್ತು ಆದಾಯ ತೆರಿಗೆ ಇಲಾಖೆಗಳು ವಿಶ್ವಾಸಾರ್ಹತೆಯ ಮಾಪಕದಲ್ಲಿ ಕೆಳಹಂತಕ್ಕೆ ಕುಸಿಯುವಂತಾಗಿದ್ದು ಕಾಲದ ವ್ಯಂಗ್ಯ.

ಕಾಂಗ್ರೆಸ್ ನಾಯಕ ಅಹ್ಮದ್ ಪಟೇಲ್ ಅವರು 2017ರಲ್ಲಿ ರಾಜ್ಯಸಭೆಗೆ ಮರು ಆಯ್ಕೆ ಬಯಸಿದಾಗ, ಡಿ.ಕೆ. ಶಿವಕುಮಾರ್ ಅವರು ಗುಜರಾತಿನ ಕಾಂಗ್ರೆಸ್ ಶಾಸಕರಿಗೆ ಬೆಂಗಳೂರು ಸಮೀಪದ ರೆಸಾರ್ಟ್‌ನಲ್ಲಿ ಆಶ್ರಯ ನೀಡಿದರು. ಇದರ ಬೆನ್ನಲ್ಲೇ ಶಿವಕುಮಾರ್ ಮನೆಯ ಮೇಲೆ ಐ.ಟಿ. ದಾಳಿ ನಡೆದಿತ್ತು! ಅದು, ಇ.ಡಿ.ಯಿಂದ ಶಿವಕುಮಾರ್ ವಿರುದ್ಧ ಪ್ರಕರಣ ದಾಖಲಾಗಿ, 2019ರಲ್ಲಿ ಅವರ ಬಂಧನ ಆಗುವತನಕ ಸಾಗಿಬಂದಿದೆ.

'ಆದಾಯ ತೆರಿಗೆ ಇಲಾಖೆ ಅಧಿಕಾರಿಗಳ ಕಿರುಕುಳದ ಬಗ್ಗೆ ಮಾತನಾಡಬೇಡಿ ಎಂಬ ಸೂಚನೆ ನನಗೆ ಬಂದಿತ್ತು' ಎಂದು ಉದ್ಯಮಿ ಕಿರಣ್ ಮಜುಂದಾರ್ ಶಾ ಹೇಳಿದ್ದರು. 'ಕೆಫೆ ಕಾಫಿ ಡೇ' ಸಂಸ್ಥಾಪಕ ವಿ.ಜಿ. ಸಿದ್ಧಾರ್ಥ ಅವರು ಆತ್ಮಹತ್ಯೆ ಮಾಡಿಕೊಳ್ಳುವ ಮೊದಲು ಬರೆದಿದ್ದು ಎನ್ನಲಾದ ಪತ್ರದಲ್ಲಿ, 'ಆದಾಯ ತೆರಿಗೆ ಅಧಿಕಾರಿಯೊಬ್ಬರಿಂದ ಬಹಳ ಕಿರುಕುಳ ಇತ್ತು' ಎಂಬ ಉಲ್ಲೇಖವಿತ್ತು. 2019ನೆಯ ಇಸವಿಯನ್ನು ಇ.ಡಿ. ಮತ್ತು ಆದಾಯ ತೆರಿಗೆ ಇಲಾಖೆಯು ಉದ್ಯಮಿಗಳು, ವಿರೋಧ ಪಕ್ಷಗಳ ಮುಖಂಡರ ಪಾಲಿಗೆ ಸ್ಮರಣೀಯಗೊಳಿಸಿದವು ಎಂದು ಮಾರ್ಮಿಕವಾಗಿ ಹೇಳಲಡ್ಡಿಯಿಲ್ಲ!